# ಫ್ಲ್ಯಾಶ್ ಮೊಬ್ ಮೂಲಕ ಹೆಚ್.ಐ.ವಿ. ಏಡ್ಸ್ ಅರಿವು



ಕಿತ್ತೂರ ಕರ್ನಾಟಕ ವಾರ್ತೆ

ಗದಗ, ಡಿ.೧ : ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಶನ್ ಸೊಸೈಟಿ ಬೆಂಗಳೂರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಘಟಕ, ಗದಗ ಜಿಲ್ಲೆಯ ವಿಡಿಎಸ್ ಕಲಾ ಮಹಾವಿದ್ಯಾಲಯ ಎನ್.ಎಸ್.ಎಸ್. ಹಾಗೂ ರೆಡ್ ರಿಬ್ಬನ್ ಕ್ಲಬ್‌ಗಳ ಸಂಯುಕ್ತ ಆಶ್ರಯದಲ್ಲಿ ಡಾ. ಪಂಡಿತ ಪುಟ್ಟರಾಜ ಗವಾಯಿಗಳ ಕಲಾ ಮಹಾವಿದ್ಯಾಲಯದಲ್ಲಿ ಶನಿವಾರ ಹೆಚ್.ಐ.ವಿ/ಏಡ್ಸ್ ತಡೆಗಟ್ಟಲು ತೀವ್ರತರವಾದ ಐ.ಇ.ಸಿ ಪ್ರಚಾರಾಂದೋಲನ-೨೦೨೪ ರ ಅಂಗವಾಗಿ ರೆಡ್ ರಿಬ್ಬನ್ ಕಾಲೇಜು ವಿದ್ಯಾರ್ಥಿಗಳಿಂದ ಫ್ಲ್ಯಾಶ್ ಮೊಬ್ ಮೂಲಕ ಹೆಚ್.ಐ.ವಿ.ಏಡ್ಸ್ ಅರಿವು ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ. ಅರುಂಧತಿ ಕುಲಕರ್ಣಿ ಅವರು ಮಾತನಾಡಿ, ಹೆಚ್.ಐ.ವಿ. ಏಡ್ಸ್ ತಡೆಗಟ್ಟುವಲ್ಲಿ ಯುವಕರ ಪಾತ್ರ ಮುಖ್ಯವಾಗಿದ್ದು, ಎಲ್ಲ ಯುವಕರು ಕಾಲೇಜು ವಿದ್ಯಾರ್ಥಿಗಳು ತ್ವರಿತಗತಿಯಲ್ಲಿ ಹೆಚ್.ಐ.ವಿ. ಬಗ್ಗೆ ಪ್ರಚಾರ ಮಾಡಿ, ಫ್ಲ್ಯಾಶ್ ಮೊಬ್, ಬೀದಿ ನಾಟಕ ಹಾಗೂ ಸಂಗೀತ ಕಲಾ ಪ್ರದರ್ಶನಗಳ ಮೂಲಕ ಹೆಚ್.ಐ.ವಿ. ಏಡ್ಸ್ ಅರಿವನ್ನು ಸಮುದಾಯದಲ್ಲಿ ಮೂಡಿಸಬೇಕಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಪ್ರಾಚಾರ್ಯರಾದ ಡಾ. ಆರ್.ಎಸ್. ದಾನರೆಡ್ಡಿ ಮಾತನಾಡಿ, ವಿದ್ಯಾರ್ಥಿಗಳು ಯುವ್ವನದಲ್ಲಿ ತಮ್ಮ ಜೀವನವನ್ನು ಜೋಪಾನ ಮಾಡಿಕೊಂಡು ಆರೋಗ್ಯಕರ ನಡುವಳಿಕೆಗಳನ್ನು ರೂಢಿಸಿಕೊಳ್ಳಲು ಕರೆ ನೀಡಿದರು.

ಫ್ಲ್ಯಾಶ್ ಮೊಬ್ ಜನಜಾಗೃತಿ ಕಾರ್ಯಕ್ರಮದಲ್ಲಿ ಡಾ. ಸಿಂಗಾಡಿ, ನಾಟಕ ರಚನೆ ನಿರ್ದೇಶಿಸಿದರು. ಕಾಲೇಜಿನ ವಿದ್ಯಾರ್ಥಿ ಪ್ರತಿನಿಧಿ ದೇವರಾಜಸಿದ್ದಯ್ಯ, ಹಾಗೂ ಎನ್.ಎಸ್.ಎಸ್ ಸ್ವಯಂ ಸೇವಕರು, ಕಾಲೇಜು ಸಿಬ್ಬಂದಿ, ಆರೋಗ್ಯ ಇಲಾಖೆಯ ಸಿಬ್ಬಂದಿ ರವಿ ಪತ್ತಾರ ಹಾಜರಿದ್ದರು.

ಪ್ರೊ.ಮಂಜುಳಾ ಹೊಂಬಾಳ ಸ್ವಾಗತಿಸಿದರು. ಬಸವರಾಜ ಲಾಳಗಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

PRINTED, PARTNER, PUBLISHER, BY MANJUNATH BASAPPA ABBIGERI ON BEHALF OF KITTUR KAR
NO.33/1&15/1,(EASTERN PART) M.T.SAGAR INDUSTRIAL ESTATE GOKUL ROAD HUBLI- 58003

01-12-2024
ಕಿತ್ತೂರ ಕರ್ನಾಟಕ

D-22-1-2023 ನವೋದಯ ದಿನಪತ್ರಿಕೆ

ನಮ್ಮೂರ ಸಮಾಚಾರ

# ರಕ್ತದಾನದಿಂದ ವ್ಯಕ್ತಿಯ ಚೈತನ್ಯ ವೃದ್ಧಿಯಾಗುವದು




ಗದಗ, ಜ. 21. ಎಲ್ಲ ದಾನಗಳಿಗಿಂತ ರಕ್ತದಾನ ಅತ್ಯಂತ ಶ್ರೇಷ್ಠವಾಗಿದೆ, ಜೀವನ್ಮರಣ ಸ್ಥಿತಿಯಲ್ಲಿರುವ ವ್ಯಕ್ತಿಗೆ ಪುನರ್ ಜನ್ಮ ನೀಡಿದ ಪುಣ್ಯ ರಕ್ತದಾನಿಗೆ ಸಿಗಲಿದೆ. ಜನಸಂಖ್ಯೆ ಹೆಚ್ಚಾಗಿದ್ದು ಬೆಳೆಯುತ್ತಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಇದು ಅತ್ಯಂತ ಅಮೂಲ್ಯವಾಗಿದೆ ರಕ್ತದಾನ ಮಾಡುವದರಿಂದ ವ್ಯಕ್ತಿಯ ಚೈತನ್ಯ ವೃದ್ಧಿಯಾಗುವದು ಎಂದು ಡಾ. ಮಲ್ಲಿಕಾರ್ಜುನ ಪಟ್ಟಣಶೆಟ್ಟಿ ಹೇಳಿದರು.

ಅವರು ನಗರದ ಪಿ.ಪಿ.ಜಿ.ಕಲಾ ಮಹಾವಿದ್ಯಾಲಯದ ಯುಥ್ ರೆಡ್‌ಕ್ರಾಸ್ ಘಟಕ,ಎನ್.ಎಸ್.ಎಸ್. ಘಟಕ ಹಾಗೂ ಗದಗ ಜಿಲ್ಲಾ ವೈದ್ಯಕೀಯ ವಿಜ್ಞಾನ ಸಂಸ್ಥೆಯ ರಕ್ತನಿಧಿ ಕೇಂದ್ರದ ಸಹಯೋಗದಲ್ಲಿ ಸ್ವಾಮಿ ವಿವೇಕಾನಂದರ ಯುವ ಸಪ್ತಾಹ ಅಂಗವಾಗಿ ಏರ್ಪಡಿಸಿದ್ದ ರಕ್ತದಾನ ಶಿಬಿರದಲ್ಲಿ ಮಾತನಾಡಿದರು.

ಮಹಿಳೆಯರ ಹೆರಿಗೆ ಹಾಗೂ ಅಪಘಾತವಾದಾಗ ರಕ್ತದ ಅವಶ್ಯಕತೆ ಅತಿ ಅವಶ್ಯ ಬರುತ್ತದೆ. ರಕ್ತದಾನ ಮಾಡುವುದರಿಂದ ವ್ಯಕ್ತಿಯ ಆರೋಗ್ಯ ಸುಧಾರಿಸುವುದು ಎಂದು ಡಾ. ಎಸ್.ಬಿ. ಪಾಟೀಲ ಹೇಳಿದರು

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ.ಜಿ.ಎಸ್. ಯತ್ನಟ್ಟಿ ಪ್ರಾಸ್ತಾವಿಕ ಮಾತನಾಡಿದರು.

ವೇದಿಕೆಯಲ್ಲಿ ಯುಥ್ ರೆಡ್‌ಕ್ರಾಸ ಘಟಕಾಧಿಕಾರಿ ಪ್ರೊ.ಬಿ. ಎಮ್. ಗಾಣಿಗೇರ. ಎನ್.ಎಸ್.ಎಸ್. ಘಟಕಾಧಿಕಾರಿ ಪ್ರೊ ಶ್ರೀಮತಿ.ಎಮ್. ಎನ್.ಹೊಂಬಾಳಿ ಜಿಮ್ಸನ ಡಾ: ಶೈನಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಪ್ರೊ. ಎ. ಕೆ ಪೂಜಾರ ಡಾ: ಆರ್. ಎಸ್. ದಾನರೆಡ್ಡಿ ಪ್ರೊ.ಎಮ್.ಆಯ್.ಕೋಟಾರ ಸುಭಾಷ ಓಂಕಾರ. ಹಾಜರಿದ್ದರು.

ಪ್ರೊ ಶ್ರೀಮತಿ. ಎಮ್. ಎನ್. ಹೊಂಬಾಳಿ ನಿರೂಪಿಸಿದರು. ಪ್ರೊ. ಬಿ. ಎಂ. ಗಾಣಿಗೇರ ಸ್ವಾಗತಿಸಿದರು. ಪ್ರೊ .ಕವಿತಾ ಬಡಿಗೇರ ವಂದಿಸಿದರು.

ಕಿತ್ತೂರ ಕರ್ನಾಟಕ ದಿನಪತ್ರಿಕೆ
23-01-2023

# ರಕ್ತದಾನದಿಂದ ವ್ಯಕ್ತಿಯ ಚೈತನ್ಯ ವೃದ್ಧಿಯಾಗುವದು




ಕಿತ್ತೂರ ಕರ್ನಾಟಕ ವಾರ್ತೆ

ಗದಗ, ೨೨ : ಎಲ್ಲ ದಾನಗಳಿಗಿಂತ ರಕ್ತದಾನ ಅತ್ಯಂತ ಶ್ರೇಷ್ಠವಾಗಿದೆ. ಜೀವನ್ಮರಣ ಸ್ಥಿತಿಯಲ್ಲಿರುವ ವ್ಯಕ್ತಿಗೆ ಪುನರಜನ್ಮ ನೀಡುವ ಮಹತ್ವ ರಕ್ತದಾನಿಗೆ ಸಿಗಲಿದೆ. ಜನಸಂಖ್ಯೆ ಹೆಚ್ಚಾಗಿದ್ದು ಒತ್ತಡದ ಸಾಮಾಜಿಕ ವ್ಯವಸ್ಥೆಯಲ್ಲಿ ಇದು ಅತ್ಯಂತ ಅಮೂಲ್ಯವಾಗಿದೆ. ರಕ್ತದಾನ ಮಾಡುವುದರಿಂದ ವ್ಯಕ್ತಿಯ ಚೈತನ್ಯ ವೃದ್ಧಿಯಾಗುವದು ಎಂದು ಡಾ. ಮಲ್ಲಿಕಾರ್ಜುನ ಪಟ್ಟಣಶೆಟ್ಟಿ ತಿಳಿಸಿದರು.

ನಗರದ ಪಿ.ಪಿ.ಜಿ.ಕಲಾ ಮಹಾವಿದ್ಯಾಲಯದ ಯುಥ್ ರೆಡ್‌ಕ್ರಾಸ್ ಘಟಕ, ಎನ್.ಎಸ್.ಎಸ್. ಘಟಕ ಹಾಗೂ ಗದಗ ಜಿಲ್ಲಾ ವೈದ್ಯಕೀಯ ವಿಜ್ಞಾನ ಸಂಸ್ಥೆಯ ರಕ್ತನಿಧಿ ಕೇಂದ್ರದ ಸಹಯೋಗದಲ್ಲಿ ಸ್ವಾಮಿ ವಿವೇಕಾನಂದರ ಯುವ ಸಪ್ತಾಹ ಅಂಗವಾಗಿ ರಕ್ತದಾನ ಶಿಬಿರ ಜರುಗಿತು. ಮಹಿಳೆಯರ ಹೆರಿಗೆ ಹಾಗೂ ಅಪಘಾತವಾದಾಗ ರಕ್ತದ ಅವಶ್ಯಕತೆ ಅತಿ ಜರೂರ ಇರುತ್ತದೆ. ರಕ್ತದಾನ ಮಾಡುವುದರಿಂದ ವ್ಯಕ್ತಿಯ ಆರೋಗ್ಯ ಸುಧಾರಿಸುವದೆಂದು ಡಾ. ಎಸ್. ಬಿ. ಪಾಟೀಲ್ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಜಿ. ಎಸ್. ಯತ್ನಟ್ಟಿ ವಹಿಸಿ ಸಂದರ್ಭನುಸಾರವಾಗಿ ಮಾತನಾಡಿದರು. ವೇದಿಕೆ ಮೇಲೆ ಯುಥ್ ರೆಡಕ್ರಾಸ ಘಟಕಾಧಿಕಾರಿ ಪ್ರೊ. ಬಿ. ಎಮ್. ಗಾಣಿಗೇರ, ಎನ್.ಎಸ್.ಎಸ್. ಘಟಕಾಧಿಕಾರಿ ಪ್ರೊ. ಶ್ರೀಮತಿ ಎಮ್. ಎನ್. ಹೊಂಬಾಳಿ, ಜೆಮ್ಮನ ಡಾ. ಶೈನಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಪ್ರೊ. ಬಿ. ಕೆ ಪೂಜಾರ, ಡಾ. ಆರ್. ಎಸ್. ದಾನರೆಡ್ಡಿ, ಪ್ರೊ. ಎಚ್. ಆಂಡಗ್. ಹೊಂಬಾಳಿ, ಶ್ರೀ ಸುಭಾಷ ಓಂಕಾರ ಹಾಜರಿದ್ದರು. ಕಾರ್ಯಕ್ರಮ ನಿರೂಪಣೆಯನ್ನು ಪ್ರೊ. ಶ್ರೀಮತಿ ಎಮ್. ಎನ್. ಹೊಂಬಾಳಿ ಸ್ವಾಗತಿಸಿದರು. ಪ್ರೊ. ಬಿ. ಎಂ. ಗಾಣಿಗೇರ ಮಾಡಿದರು. ಪ್ರೊ. ಶ್ರೀಮತಿ ಕವಿತಾ ಬಡಿಗೇರ ವಂದನಾರ್ಪಣೆಗೈದರು.

ಕಿತ್ತೂರ ಕರ್ನಾಟಕ
6-2-2019 ಬುಧವಾರ

# ಪಿಪಿಜಿ ಕಾಲೇಜ್ ವಿದ್ಯಾರ್ಥಿಗಳಿಂದ ರಕ್ತದಾನ



ಗದಗ, ೫ : ಪಂ. ಪಂಚಾಕ್ಷರ ಗವಾಯಿಗಳವರ ಕಲಾ ಮಹಾವಿದ್ಯಾಲಯದ ಎನ್.ಎಸ್.ಎಸ್. ಮತ್ತು ಯುಥ್ ರೆಡ್ ಕ್ರಾಸ್ ಘಟಕ ಹಾಗೂ ಗದಗ ಭಾವಸಾರ ವಿಜನ್ ಸಂಯುಕ್ತ ಆಶ್ರಯದಲ್ಲಿ ನಗರದ ಐಎಂಎ ರಕ್ತಭಂಡಾರದಲ್ಲಿ ವಿಶ್ವಕ್ಯಾನ್ಸರ್ ದಿನಾಚರಣೆಯಂಗವಾಗಿ ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು.

ಮಹಾವಿದ್ಯಾಲಯದ ವಿದ್ಯಾರ್ಥಿಗಳಾದ ಆನಂದ ಪಂಬಳಮಠ, ಬಸಪ್ಪ ಹಾಳಕೇರಿ, ಅನಂತ ಬಂಡಿವಡ್ಡರ, ಶಂಕರಗೌಡ ಗೌಡರ, ಬಸವರಾಜ ನಾಯ್ಕರ್, ಹಲವಾರು ವಿದ್ಯಾರ್ಥಿಗಳು ರಕ್ತದಾನ ಮಾಡಿದರು.

ಐಎಂಎ ರಕ್ತಭಂಡಾರದ ಮುಖ್ಯಸ್ಥರಾದ ಡಾ.ರಾಜಶೇಖರ ಪವಾಡಶೆಟ್ಟರ, ಮಹಾವಿದ್ಯಾಲಯದ ಪ್ರಾ. ಬಿ.ಜಿ.ಹಿರೇಮಠ, ಎನ್.ಎಸ್.ಎಸ್ ಅಧಿಕಾರಿ ಪ್ರೊ.ಬಿ.ಎಂ.ಗಾಣಿಗೇರ, ಭಾವಸಾರ ವಿಜನ್ ಇಂಟರ್‌ನ್ಯಾಷನಲ್ ಏರಿಯಾ ೧೧೧ರ ಗವರ್ನರ್ ಅಶೋಕ ಸುಲಾಖೆ, ವಿಜನ್ ಅಧ್ಯಕ್ಷ ರಾಜೇಂದ್ರ ಶ್ರೀಮಲ್ಲೆ, ಕಾರ್ಯದರ್ಶಿ ಶ್ರೀಮತಿ ಅನುರಾಧಾ ವೈಕುಂಠೆ, ಉಪಾಧ್ಯಕ್ಷೆ ವೈಕುಂಠೆ, ಶ್ರೀಮತಿ ಜಯಶ್ರೀ ಶ್ರೀಮಲ್ಲೆ, ಎನ್.ಎಸ್.ಎಸ್.ಶಿಬಿರದ ಮುಂತಾದವರಿದ್ದರು.

ಮೋಹನ ಮತಿಹಾಳ, ಪ್ರಾ. ಸಿದ್ದಲಿಂಗ, ವೆಂಕಟೇಶ ಪೂಜಾರಿ, ರವಿ ಶಿರಿ, ಶರೀಫ್ ಇಟಗಿ, ಮಹಾಂತೇಶ ಕಡೇಮನಿ, ಗಿರೀಶ ಗೊಂದಿ, ರವಿ ಜೋಳಗಟ್ಟಿ, ಮಂಜುನಾಥ ಭಜಂತ್ರಿ, ಶರಣ ಲಿಂಗಾಪೂರ ಮುಂತಾದವರು ಪಾಲ್ಗೊಂಡಿದ್ದರು.

2/12/22 ವಿಶ್ವ ಏಡ್ಸ್ ದಿನಾಚರಣೆ-2022

# ಏಡ್ಸ್ ನಿಯಂತ್ರಣದಲ್ಲಿ ಯುವಕರ ಪಾತ್ರ ಪ್ರಮುಖವಾಗಿದೆ




ಗದಗ, ಡಿ. 1. ಹೆಚ್‌ಐವಿ ಏಡ್ಸ್ ನಿಯಂತ್ರಣದಲ್ಲಿ ಯುವಕರ ಪಾತ್ರ ಪ್ರಮುಖವಾಗಿದೆ. ಯುವಕರು, ಕಾಲೇಜು ವಿದ್ಯಾರ್ಥಿಗಳು, ಗ್ರಾಮೀಣ ಜನತೆಗೆ ಏಡ್ಸ್ ನಿಯಂತ್ರಣದ ಕುರಿತು ತಿಳುವಳಿಕೆ ಮೂಡಿಸಿ, ಹೆಚ್‌ಐವಿ ಮುಕ್ತ ಸಮಾಜ ನಿರ್ಮಾಣ ಮಾಡಲು ಕೈ ಜೋಡಿಸಬೇಕೆಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ.ಗುರುಪ್ರಸಾದ ತಿಳಿಸಿದರು.

ಗದಗ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ, ಜಿಲ್ಲಾ ವಾರ್ತಾ ಇಲಾಖೆ, ಜಿಮ್ಸ್ ರಕ್ತನಿಧಿ ಕೇಂದ್ರ, ಜಿಲ್ಲಾ ಆಸ್ಪತ್ರೆ, ಜಿಲ್ಲಾ ರೆಡ್‌ಕ್ರಾಸ್ ಸಂಸ್ಥೆ, ಐಎಮ್.ಎ. ರಕ್ಷಕ, ಜಿಲ್ಲಾ ಮಹಿಳಾ ಒಕ್ಕೂಟ, ಸ್ನೇಹ ಸಂಕುಲ ಸಂಸ್ಥೆ, ನವಚೇತನ ಸಂಸ್ಥೆ, ಕೆ.ಹೆಚ್.ಪಿ.ಟಿ.ಸಂಸ್ಥೆ, ರೆಡ್ ರಿಬ್ಬನ್ ಕ್ಲಬ್, ಜಿಮ್ಸ್ ಮೆಡಿಕಲ್ ಕಾಲೇಜು ಹಾಗೂ ಶಿಕ್ಷಣ ಇಲಾಖೆ, [illegible] ನರ್ಸಿಂಗ್ ಕಾಲೇಜು, ಎಸ್.ಐ.ಟಿ. ಪ್ಯಾರಾ ಮೆಡಿಕಲ್ ಕಾಲೇಜು, ಮದರ್ ಥೇರೆಸಾ ನರ್ಸಿಂಗ್ ಕಾಲೇಜು, ಮಾನ್ವಿ ಕಾನೂನು ಮಹಾವಿದ್ಯಾಲಯ, ಆರ್.ಡಿ.ಪಿ.ಆರ್ ವಿಶ್ವವಿದ್ಯಾಲಯ ಗದಗ ಇವರುಗಳ ಸಂಯುಕ್ತ ಆಶ್ರಯದಲ್ಲಿ ಜಿಲ್ಲಾ ಮಟ್ಟದ ವಿಶ್ವ ಏಡ್ಸ್ ದಿನಾಚರಣೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸಮಾಜದಲ್ಲಿ ಹೆಚ್‌ಐವಿ ಸೋಂಕಿತರಿಗೆ ಮತ್ತು ಬಾಧಿತರಿಗೆ ಆಗುವ ಅಸಮಾನತೆಯನ್ನು ತೊಲಗಿಸಲು ಮುಂದಾಗಬೇಕು. ಸೋಂಕಿತರಿಗೆ ಸೌಲಭ್ಯ ನೀಡುವ ನಿಟ್ಟಿನಲ್ಲಿ ಕಾರ್ಯತತ್ಪರರಾಗಬೇಕೆಂದು . ಹೆಚ್.ಐ.ವಿ. ಕುರಿತು ಮಾಹಿತಿಯನ್ನು ಪಡೆದು ಸಮುದಾಯಕ್ಕೆ ತಿಳಿಸುವುದರೊಂದಿಗೆ ಸಮುದಾಯವನ್ನು ಬಲಪಡಿಸಿ ಮಾಡಲು ಸಾಧ್ಯವೆಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ. ಗುರುಪ್ರಸಾದ ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಜಗದೀಶ ನುಚ್ಚಿನ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಎಚ್.ಐ.ವಿ. ಸೋಂಕಿನ ಪ್ರಮಾಣ ಕಳೆದ ಹತ್ತು ವರ್ಷಗಳ ಅಂಕಿ ಅಂಶಗಳನ್ನು ಗಮನಿಸಲಾಗಿ ಗಣನೀಯವಾಗಿ ಇಳಿಕೆಯಾಗಿದ್ದನ್ನು ಕಂಡುಬಂದಿದೆ. ಹಲವಾರು ತಿಳುವಳಿಕೆ ಕಾರ್ಯಕ್ರಮಗಳು ಹಾಗೂ ಜಾಗೃತಿ ಜಾಥಾಗಳು ಇದಕ್ಕೆ ಕಾರಣಗಳಾಗಿವೆ. ಆಪ್ತ ಸಮಾಲೋಚನೆಯಿಂದ ನೈತಿಕ ಬೆಂಬಲ ಮಾನಸಿಕ ಬೆಂಬಲವನ್ನು ಪಡೆದು ಇತರರಂತೆ ಸಾಮಾನ್ಯ ಜೀವನ ನಡೆಸಬಹುದು.ಈ ವರ್ಷದ ಘೋಷಣೆಯಂತೆ ಐಕ್ಯ ಅಂತ್ಯಗೊಳಿಸಿ ಅಸಮಾನತೆಗಳನ್ನು ಕೊನೆಗಾಣಿಸಲು ಪ್ರತಿಯೊಬ್ಬರ ಆರೋಗ್ಯವನ್ನು ಕಾಪಾಡಲು ಹಾಗೂ ಪ್ರತಿಯೊಬ್ಬರನ್ನು ಮುಖ್ಯವಾಗಿಡಲು ಎಲ್ಲರೂ ಒಂದಾಗಬೇಕಾಗಿದೆ ಎಂಬ ಆಂದೋಲನದೊಂದಿಗೆ ಏಡ್ಸ್‌ರೋಗ ಹರಡುತ್ತಿರುವ ಪ್ರಮಾಣವನ್ನು ಸೊನ್ನೆಗೆ ತಂದಾಗ ಈ ದಿನಾಚರಣೆಯ ಉದ್ದೇಶ ಪೂರ್ಣಗೊಳ್ಳುವುದು ಎಂದು ತಿಳಿಸಿದರು.

ಡಾ. ಅರವಿಂದ ಕರಿಗಾರಣ್ಣವರ ಅವರು ಉಪನ್ಯಾಸ ನೀಡುತ್ತಾ ಹೆಚ್.ಐ.ವಿ. ಸೋಂಕಿತರನ್ನು ಮಾನವೀಯತೆಯಿಂದ ನೋಡಿ, ಇಲಾಖೆಯ ಔಷಧೋಪಚಾರವನ್ನು ಸರಿಯಾಗಿ ಪಡೆಯುವಲ್ಲಿ ಯುವಕರು ಸಮಾಜದಲ್ಲಿ ತಿಳುವಳಿಕೆ ನೀಡಬೇಕೆಂದು ಹೇಳಿದರು.

ಚಿತ್ರಗಳನ್ನು ತೋರಿಸುವುದರ ಮುಖಾಂತರ ಯುವಕರು ಯಾವ ರೀತಿಯಾಗಿ ಮಾಹಿತಿ ಪಡೆದುಕೊಂಡು ಸಮುದಾಯದಲ್ಲಿ ಅರಿವು ಮೂಡಿಸಬೇಕೆಂದು ತಿಳಿಸಿದರು.

ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ. ಅರುಂಧತಿ ಕೆ. ಮಾತನಾಡಿ ಇಲಾಖೆಯ ಹಾಗೂ ಸಂಘ ಸಂಸ್ಥೆಗಳ ಸಿಬ್ಬಂದಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ, ಹೆಚ್.ಐ.ವಿ. ಸೋಂಕನ್ನು ಸೊನ್ನೆಗೆ ತರಲು ಶ್ರಮಿಸಬೇಕಾಗಿದೆ. ಜಿಲ್ಲೆಯಲ್ಲಿ 9 ಐಸಿಟಿಸಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದು, ಜಿಲ್ಲೆಯು ಸ್ಥಿತಿಗತಿ 2004ರಲ್ಲಿ 1.01 ರಷ್ಟು ಪ್ರತಿ ಶತದಷ್ಟು 2021-22ರಲ್ಲಿ 0.13 ಗೆ ಇಳಿದಿದ್ದು, ಗರ್ಭಿಣಿ ಸ್ತ್ರೀಯರಲ್ಲಿ 0.03ಗೆ ಇಳಿದಿದೆ.

(8ನೇ ಪುಟಕ್ಕೆ)

ಕಿತ್ತೂರ ಕರ್ನಾಟಕ

ಪುಟ 4 5-2-2019 ಮಂಗಳವಾರ

# ವಿಶ್ವ ಕ್ಯಾನ್ಸರ್ ದಿನಾಚರಣೆ: ಪಿಪಿಜಿ ಕಾಲೇಜ್ ವಿದ್ಯಾರ್ಥಿಗಳಿಗೆ ರಕ್ತದಾನ



ಗದಗ, ಫೆ. 4: ಗದುಗಿನ ಪಂ. ಪಂಚಾಕ್ಷರ ಗವಾಯಿಗಳವರ ಕಲಾ ಮಹಾವಿದ್ಯಾಲಯದ ಎನ್.ಎಸ್.ಎಸ್ ಮತ್ತು ಯುತ್ ರೆಡ್ ಕ್ರಾಸ್ ಘಟಕ ಹಾಗೂ ಗದಗ ಭಾವಸಾರ ವ್ಹಿಜನ್ ಸಂಯುಕ್ತ ಆಶ್ರಯದಲ್ಲಿ ಸೋಮವಾರ ನಗರದ ಐಎಂಎ ರಕ್ತಭಂಡಾರದಲ್ಲಿ ವಿಶ್ವ ಕ್ಯಾನ್ಸರ್ ದಿನಾಚರಣೆಯ ಅಂಗವಾಗಿ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿತ್ತು.

ಮಹಾವಿದ್ಯಾಲಯದ ವಿದ್ಯಾರ್ಥಿಗಳಾದ ಆನಂದ ನೀಲಗುಂದ, ಬಸವ್ವ ಮಾಳೆಕರ್, ಆನಂದ ಬಂಡೆಣ್ಣವರ, ಶಂಕರಗೌಡ ಗೌಡರ, ಬಸವರಾಜ ನಾಯ್ಕರ್ ಸೇರಿದಂತೆ ಹಲವಾರು ವಿದ್ಯಾರ್ಥಿಗಳು ರಕ್ತದಾನ ಮಾಡಿದರು.

ಈ ಸಂದರ್ಭದಲ್ಲಿ ಐಎಂಎ ರಕ್ತಭಂಡಾರದ ಮುಖ್ಯಸ್ಥರಾದ ಡಾ. ರಾಜಶೇಖರ ಪವಾಡಶೆಟ್ಟರ್, ಮಹಾವಿದ್ಯಾಲಯದ ಪ್ರಾಚಾರ್ಯ ಬಿ.ಜಿ. ಹಿರೇಮಠ, ಎನ್.ಎಸ್.ಎಸ್ ಅಧಿಕಾರಿ ಪ್ರೊ. ಬಿ.ಎಂ. ಗಾಣಗೇರ, ಭಾವಸಾರ ವ್ಹಿಜನ್ ಇಂಡಿಯಾ ಏರಿಯಾ 101ರ ಗವರ್ನರ್ ಅಶ್ವಿನ್ ಸುಲಾಖೆ, ವ್ಹಿಜನ್ ಅಧ್ಯಕ್ಷ ರಾಜೇಂದ್ರ ಶ್ರಿಮಲ್ಲೆ, ಕಾರ್ಯದರ್ಶಿ ಅನುರಾಧಾ ವೈಕುಂಠೆ, ಡಾ. ದತ್ತಾತ್ರೇಯ ವೈಕುಂಠೆ, ಜಯಶ್ರೀ ಶ್ರಿಮಲ್ಲೆ, ಪ್ರೊ. ಎಸ್.ಎಸ್. ಹಿರೇಮಠ ಮುಂತಾದವರಿದ್ದರು.

ಕಾರ್ಯಕ್ರಮದಲ್ಲಿ ವೆಂಗು ಪತಿವಾಳರ, ಚೈತ್ರಾ ಹಿರೇಕೊಪ್ಪ, ವೆಂಕಟೇಶ ಪೂಜಾರ, ರವಿ ಶಿಗ್ಲಿ, ಶರಣಪ್ಪ ಕಂದಗಲ್ಲ, ಮಹಾಂತೇಶ ಕಡೇಮನಿ, ಗಿರೀಶ ಗೊಂಡಿ, ರವಿ ಚೋರಗಸ್ತಿ, ಮಂಜುನಾಥ ಭಜಂತ್ರಿ, ಶರಣಪ್ಪ ಸಿಂಗಾಪೂರ ಮುಂತಾದವರು ಪಾಲ್ಗೊಂಡಿದ್ದರು.

ಕಿತ್ತೂರ ಕರ್ನಾಟಕ

# ಬೀದಿ ನಾಟಕಗಳು ಜಾಗೃತಿ ಮೂಡಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತವೆ



ಕಿತ್ತೂರ ಕರ್ನಾಟಕ ವಾರ್ತೆ

**ಗದಗ, ೧ :** ಜನರಲ್ಲಿ ಕೆಲವೊಂದು ತಪ್ಪು ತಿಳುವಳಿಕೆಯಿಂದ ವಿವಿಧ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದು ಆ ಸಮಸ್ಯೆ ಸಾಮಾಜಿಕ ಸಮಸ್ಯೆಯಾಗಿ ಮಾರ್ಪಟ್ಟು ಇಡೀ ವ್ಯವಸ್ಥೆಯೇ ಹಾಳಾಗುವ ಸ್ಥಿತಿ ಎದುರಾಗುತ್ತಿದ್ದು ಇಂತಹ ಜನರಿಗೆ ಜಾಗೃತಿ ಮೂಲಕ ತಪ್ಪು ತಿಳುವಳಿಕೆ ಹೋಗಲಾಡಿಸಲು ಸಾಧ್ಯ. ಈ ಜಾಗೃತಿಯಲ್ಲಿ ಹಲವಾರು ವಿಧಗಳಿದ್ದು ಅಂತಹ ವಿಧಗಳಲ್ಲಿ ನಾಟಕ ಮಾಧ್ಯಮ ಅತ್ಯಂತ ಪರಿಣಾಮಕಾರಿ ಮಾಧ್ಯಮವಾಗಿದ್ದು ಒಂದು ಅಧ್ಯಯನದ ಪ್ರಕಾರ ಶೇ.೬೦ಕ್ಕಿಂತ ಹೆಚ್ಚು ಜನರು ಈ ಮಾಧ್ಯಮದ ಮೂಲಕ ತಿಳುವಳಿಕೆಗೊಂಡಿದ್ದು ಉತ್ತಮ ಜೀವನಕ್ಕೆ ದಾರಿದೀಪವಾಗಿದೆ ಎಂದು ಗದಗ ಜಿಲ್ಲಾ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಅಧಿಕಾರಿ ಡಾ. ಎಸ್. ಎಸ್. ನೀಲಗುಂದರವರು ಇತ್ತೀಚಿಗೆ ಪಂಡಿತ ಪಂಚಾಕ್ಷರ ಗವಾಯಿಗಳವರ ಕಲಾ ಮಹಾವಿದ್ಯಾಲಯದಲ್ಲಿ ಯುಥ್ ರೆಡ್‌ಕ್ರಾಸ್, ಎನ್‌ಎಸ್‌ಎಸ್ ಘಟಕಗಳ ಹಾಗೂ ಗದಗ ಜಿಲ್ಲಾ ಆರೋಗ್ಯ ಇಲಾಖೆ ಸಂಯೋಗದಲ್ಲಿ ಏಡ್ಸ್ ಮಹಾಮಾರಿ ಜಾಗೃತಿ ಅಭಿಯಾನ ಹಾಗೂ ಬೀದಿನಾಟಕದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡುತ್ತ, ಏಡ್ಸ್ ನಮ್ಮ ದೇಶದಲ್ಲಿ ಮೂರು ದಶಕಗಳಿಂದ ಕಂಡು ಬಂದಿದ್ದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅದರ ನಿಯಂತ್ರಣಕ್ಕೆ ಎಷ್ಟೇ ಕ್ರಮಗಳನ್ನು ಜಾರಿಗೊಳಿಸಿದರೂ ಕೂಡಾ ಇನ್ನೂ ದೇಶದಲ್ಲಿ ಹಾಗೂ ನಮ್ಮ ರಾಜ್ಯದಲ್ಲಿ ಅಲ್ಲಲ್ಲಿ ಯುವಕರಲ್ಲಿ ಹರಡುತ್ತಿದ್ದು ತಳವಳಕಾರಿ ಸಂಗತಿಯಾಗಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಬೀದಿ ನಾಟಕಗಳನ್ನು ಪ್ರದರ್ಶಿಸುವ ಮೂಲಕ ಜಾಗೃತಿಯುಂಟು ಮಾಡುತ್ತಿದ್ದು ಇಂದು ಈ ಮಹಾವಿದ್ಯಾಲಯದ ಎನ್‌ಎಸ್‌ಎಸ್ ಹಾಗೂ ಯುಥ್ ರೆಡ್‌ಕ್ರಾಸ್ ಸ್ವಯಂಸೇವಕರು ಬೀದಿ ನಾಟಕ ಪ್ರದರ್ಶಿಸುವುದರ ಮೂಲಕ ನಮ್ಮ ಇಲಾಖೆಗೆ ಹೆಮ್ಮೆಯ ವಿಷಯವಾಗಿದೆ ಎಂದು ಹೇಳಿದರು.

ಇನ್ನೋರ್ವ ಮುಖ್ಯ ಅತಿಥಿಗಳಾಗಿ ಆಗಮಿಸಿದ ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ. ಅರುಂಧತಿ ಕುಲಕರ್ಣಿಯವರು ಮಾತನಾಡಿ, ಎಚ್.ಐ.ವಿ ಏಡ್ಸ್ ತಡೆಗಟ್ಟುವಲ್ಲಿ ಯುವಕರ ಪಾತ್ರ ಪ್ರಮುಖವಾಗಿದ್ದು ಪರಸ್ಪರ ಯುವಕರು ಪ್ರಹಸನ, ಬೀದಿ ನಾಟಕ, ಕಲಾಪ್ರದರ್ಶನ ಹೆಚ್ಚು ಹೆಚ್ಚು ಏರ್ಪಡಿಸುವುದರ ಮೂಲಕ ಎಚ್.ಐ.ವಿ ಏಡ್ಸ್ ತಡೆಗಟ್ಟುವಲ್ಲಿ ಯುವಕರು ಸಕ್ರಿಯವಾಗಿ ಪಾಲ್ಗೊಳ್ಳುವುದರ ಮೂಲಕ ಜಾಗೃತಿ ಪ್ರಚಾರಾಂದೋಲನ ಘೋಷವಾಕ್ಯದಂತೆ ಸ್ವಸ್ಥ ಡಿಜಿಟಲ್ ಅಭಿವೃದ್ಧಿಗಾಗಿ ಯುವಜನತೆಯ ಮುಂದಾಳತ್ವ ಯುವಕರು ಸ್ವಯಂದಿಂದ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಸದೃಢ ಆರೋಗ್ಯವನ್ನು ಹೊಂದಿ ಸದೃಢ ಭಾರತವನ್ನು ನಿರ್ಮಾಣ ಮಾಡಲು ಕೈಜೋಡಿಸಬೇಕೆಂದು ಕರೆ ನೀಡಿದರು. ಮುಂದುವರೆದು ಎಚ್.ಐ.ವಿ ತಡೆ ಕಾಯ್ದೆ ೨೦೧೭, ನ್ಯಾಕೋ ಏಡ್ಸ್ ಆ್ಯಪ್ ೧೦೯೭ ಸಹಾಯವಾಣಿ, ಎಸ್.ಟಿ.ಐ. ಕಾಯಿಲೆಗಳು ಇತ್ಯಾದಿ ವಿಷಯಗಳ ಬಗ್ಗೆ ಬಹು ಮಾರ್ಮಿಕವಾಗಿ ಸವಿವರ ತಿಳಿಸಿದರು.

ಸಮಾರಂಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡುವುದರ ಮೂಲಕ ಸರ್ವರನ್ನೂ ರೆಡ್‌ಕ್ರಾಸ್ ಘಟಕದ ಅಧಿಕಾರಿಗಳಾದ ಡಾ. ವಿ. ಎ. ನಿಂಗೋಜಿ ಸ್ವಾಗತಿಸಿದರು. ಸಮಾರಂಭದ ಅಧ್ಯಕ್ಷತೆಯಲ್ಲಿ ಪ್ರಾ. ಆರ್. ಎಸ್. ದಾನರಡ್ಡಿ ವಹಿಸಿ ಸಮಾರೋಪ ಭಾಷಣ ಮಾಡಿದರು. ಎನ್.ಎಸ್.ಎಸ್. ಅಧಿಕಾರಿ ಪ್ರೊ. ಶ್ರೀಮತಿ ಎಂ. ಎಸ್. ಹೊಂಬಾಳಿಯವರು ಕಾರ್ಯಕ್ರಮ ನಿರೂಪಣೆಯೊಂದಿಗೆ ವಂದನಾರ್ಪಣೆಗೈದರು. ನಂತರ ವೀರೇಶ್ವರ ಪುಣ್ಯಾಶ್ರಮದ ಆವರಣದಲ್ಲಿ ಸ್ವಯಂಸೇವಕರಿಂದ ಮೂಡಿ ಬಂದ ಬೀದಿ ನಾಟಕ ಈ ಪ್ರದರ್ಶನವನ್ನು ಮಠದ ಭಕ್ತರು, ಪಂಚಾಕ್ಷರ ಗವಾಯಿಗಳವರ ಕಲಾ ಹಾಗೂ ಸಂಗೀತ ಮಹಾವಿದ್ಯಾಲಯದ ಸಿಬ್ಬಂದಿಗಳು, ವಿದ್ಯಾರ್ಥಿಗಳು ಪಂಚಾಕ್ಷರ ಗವಾಯಿಗಳ ಪ್ರಾಥಮಿಕ, ಪ್ರೌಢ ಸಂಗೀತ ಪಾಠಶಾಲೆ ಎಲ್ಲ ಸಿಬ್ಬಂದಿಗಳು ಹಾಜರಿರುವುದರೊಂದಿಗೆ ಪದವಿ ಪೂರ್ವ ಮಹಾವಿದ್ಯಾಲಯದ ಎಲ್ಲಾ ಸಿಬ್ಬಂದಿಗಳು ಹಾಜರಿದ್ದು ಏಡ್ಸ್ ಜಾಗೃತಿ ಉಂಟು ಮಾಡುವಲ್ಲಿ ಈ ನಾಟಕ ಯಶಸ್ವಿಯಾಗಿದೆ ಎಂದು ಪ್ರಶಂಸೆಗೆ ಒಳಪಟ್ಟಿತು.

ಈ ಬೀದಿ ನಾಟಕದ ಸಂಯೋಜಕರಾದ ಡಾ. ವ್ಹಿ. ಎ. ನಿಂಗೋಜಿ, ಪ್ರೊ. ಎಂ. ಎಸ್. ಹೊಂಬಾಳಿ, ಸುಭಾಸ ಓಂಕಾರ, ಬಸವರಾಜ ಕುಂಬಾರ, ವ್ಹಿ.ಎಸ್. ಹೊಸಮಠ, ಬೀದಿ ನಾಟಕದ ಪಾತ್ರಧಾರಿಗಳಾದ ರಾಜಶೇಖರ, ದೇವು, ಪ್ರಶಾಂತ, ಪವಿತ್ರಾ ಗೊಂಡಬಿ, ಸಂಗೀತ ನಿರ್ದೇಶನ ನೀಡಿದ ಜಗನ್ನಾಥ ಹಾಗೂ ಪಿಜಿ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಿಗೆ, ಸಿಬ್ಬಂದಿ ವರ್ಗಕ್ಕೆ ಗದಗ ಜಿಲ್ಲಾ ಡೆಪ್ಯೂಟಿ ಆರೋಗ್ಯ ಅಧಿಕಾರಿ ಬಸವರಾಜ ಲಾಳಗಟ್ಟಿ ಇವರು ಇಲಾಖೆಯ ಪರವಾಗಿ ಕೃತಜ್ಞತೆಯನ್ನು ತಿಳಿಸಿದರು.

ದಿನಾಂಕ 21-09-2024 ವಿಶ್ವ ಶಾಂತಿ ದಿನಾಚರಣೆ ಕಾರ್ಯಕ್ರಮ
ವರದಿ

ವಿಶ್ವ ಸುಂದರವಾಗಿರಲು ಶಾಂತಿ ಅವಶ್ಯಕ




ಇಂದಿನ ಆಧುನಿಕ ಬದುಕಿನಲ್ಲಿ ವಿವಿಧ ಕಾರಣಗಳಿಂದ ಅಶಾಂತಿ ವಿಶ್ವದೆಲ್ಲೆಡೆ ಹರಡಿದ್ದು ಭಯೋತ್ಪಾದಕ ಕೃತ್ಯದಿಂದ ಮಾನವ ಸಂತತಿಗೆ ವಿಪತ್ತು ಆವರಿಸಿದ್ದು ಈ ಚಿಂತನೆಯ ತಳಹದಿಯಲ್ಲಿ ವಿಶ್ವಶಾಂತಿ ದಿನಾಚರಣೆಯನ್ನು ಮುಖ್ಯವಾಗಿ ರೆಡ್‌ಕ್ರಾಸ್ ಸಂಸ್ಥೆಯಿಂದ ಆಚರಿಸುತ್ತಿದ್ದು ಶಾಂತಿಯಿಂದಲೆ ಸೌಂದರ್ಯದ ಬದುಕು ಸಾಧ್ಯ ಎಂದು ಪಂಡಿತ ಪಂಚಾಕ್ಷರ ಗವಾಯಿಗಳವರ ಕಲಾ ಮಹಾವಿದ್ಯಾಲಯದಲ್ಲಿ ಎನ್.ಎಸ್.ಎಸ್ ಹಾಗೂ ರೆಡ್‌ಕ್ರಾಸ್ ಘಟಕದ ಸಂಯುಕ್ತ ಆಶ್ರಯದಲ್ಲಿ ವಿಶ್ವಶಾಂತಿ ದಿನಾಚರಣೆಯಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪ್ರೊ (ಶ್ರೀಮತಿ) ಕವಿತಾ ಬಡಿಗೇರ ಮಾತನಾಡುತ್ತ ವಿಶ್ವಭ್ರಾತೃತ್ವ ಭಾವನೆ ಎಲ್ಲೆಡೆ ಹರಡಲಿ ಎಂದು ಶುಭ ಹಾರೈಸಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಾ: ಆರ್. ಎಸ್. ದಾನರಡ್ಡಿ ಶಾಂತಿದೂತ ಮಹಾತ್ಮ ಗಾಂಧೀಜಿಯ ತತ್ವ ಪಾಲನೆ ವಿಶ್ವಕ್ಕೆ ಅವಶ್ಯವಿದ್ದು, ವಿದ್ಯಾರ್ಥಿಗಳು ಚಾಚು ತಪ್ಪದೇ ಪಾಲಿಸುವುದು ಅಗತ್ಯ ಎಂದು ಸಮಾರೋಪ ಭಾಷಣದಲ್ಲಿ ಹೇಳಿದರು. ಸಮಾರಂಭದಲ್ಲಿ ಸರ್ವರನ್ನು ಮಹಾವಿದ್ಯಾಲಯದ ಯುಥ್ ರೆಡ್‌ಕ್ರಾಸ್ ಅಧಿಕಾರಿಗಳಾದ ಡಾ: ಶ್ರೀ ಎ. ನಿಂಗೋಜಿ ಪ್ರಾಸ್ತಾವಿಕ ನುಡಿಯೊಂದಿಗೆ ಸರ್ವರನ್ನು ಸ್ವಾಗತಿಸಿದರು. ವೇದಿಕೆಯಲ್ಲಿ ಪ್ರೊ, ಎಂ. ಐ. ಜೋಬಾಳಿ, ಪ್ರೊ (ಶ್ರೀಮತಿ) ಮಂಜುಳಾ ಗಿರಿಯಪ್ಪಗೌಡ್ರ, ಶ್ರೀ ಸುಭಾಸ. ಬಿ. ಓಂಕಾರ ಉಪಸ್ಥಿತರಿದ್ದರು. ನಂತರ ಎನ್.ಎಸ್.ಎಸ್.ಅಧಿಕಾರಿಗಳಾದ ಪ್ರೊ (ಶ್ರೀಮತಿ) ಎಂ. ಎನ್. ಹೊಂಬಾಳಿ ವಂದಾನಾರ್ಪಣೆಗೈದರು. ಜಿಲ್ಲಾ ರೆಡ್‌ಕ್ರಾಸ್ ವತಿಯಿಂದ ಗದುಗಿನ ಎಲ್ಲ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳಿಂದ ವಿಶ್ವಶಾಂತಿ ನಡಿಗೆ ಕಾರ್ಯಕ್ರಮ ಆಯೋಜಿಸಿದ್ದರು. ಕಾರ್ಯಕ್ರಮದಲ್ಲಿ ರೆಡ್‌ಕ್ರಾಸ್ ಅಧಿಕಾರಿ ಡಾ: ಶ್ರೀ ಎ. ನಿಂಗೋಜಿ ಹಾಗೂ ಎನ್.ಎಸ್.ಎಸ್. ಅಧಿಕಾರಿ ಪ್ರೊ (ಶ್ರೀಮತಿ) ಎಂ. ಎನ್. ಹೊಂಬಾಳಿಯವರ ನೇತೃತ್ವದಲ್ಲಿ ಸ್ವಯಂಸೇವಕರ ಜಾಥಾದಲ್ಲಿ ಪಾಲ್ಗೊಂಡ ಸ್ವಯಂ ಸೇವಕರಿಗೆ, ಅಧಿಕಾರಿಗಳು ವೇದಿಕೆಯಲ್ಲಿದ್ದ ಅತಿಥಿಗಳು ಶುಭ ಹಾರೈಸಿದರು ಆ ಜಾಥಾದಲ್ಲಿ ಎಲ್ಲಾ ಸ್ವಯಂಸೇವಕ ಪಾಲ್ಗೊಂಡು ಯಶಸ್ವಿಗೊಳಿಸಿದ್ದು ಜಿಲ್ಲಾ ಭಾರತ ರೆಡ್‌ಕ್ರಾಸ್ ಸಭಾಪತಿ ಅಧ್ಯಕ್ಷರಾದ ಡಾ: ರಾಜೇಂದ್ರ ಗೊಡಬೊಲೆ ಹಾಗೂ ಗೌರವ ಕಾರ್ಯದರ್ಶಿ ಡಾ: ಎಂ. ಡಿ. ಸಾಮುದ್ರಿಯವರು ಜಾಥಾದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದ್ದಕ್ಕೆ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು.